ಓ.ಎಸ್.ನಂ.35/2015

ಡಿ.ಡಬ್ಲ್ಯು:1

**ದಿನಾಂಕಃ29-01-2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃವಾದಿ ಪರ ಶ್ರೀ.ಎನ್.ಎಸ್. ವಕೀಲರಿಂದಃ**

ದಾವಾ ಆಸ್ತಿ ನನಗೆ ಸೇರಿದ್ದು ಅಂದರೆ ಸರಿ.ನಿಪಿ-8 ರ ಛಾಯಾಚಿತ್ರದಲ್ಲಿ ಕಾಣುವ ಆಸ್ತಿ ದಾವಾ ಆಸ್ತಿ ಅಂದರೆ ಸರಿ. ನಿಪಿ-8 ರ ಛಾಯಾಚಿತ್ರದಲ್ಲಿ ಹುಲ್ಲಿನ ಬಣವೆ ಮತ್ತು ಕಲ್ಲುಕಂಬ ಕಾಣಿಸುತ್ತವೆ ಅಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಹುಲ್ಲಿನ ಬಣವೆ ಮತ್ತು ಕಲ್ಲು ಕಂಬ ನಮಗೆ ಸೇರಿದವುಗಳು ಎಂದು ನುಡಿಯುತ್ತಾರೆ.

ಡಿ.ಡಬ್ಲ್ಯೂ:1

ನಿಪಿ-8 ರಿಂದ 10 ರಲ್ಲಿನ ಛಾಯಾಚಿತ್ರಗಳಲ್ಲಿ ಕಾಣುವ ವ್ಯಕ್ತಿ ವಾದಿ ಅಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ವಿರುದ್ಧ ಕಡೂರಿನ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ದಾಖಲು ಮಾಡಿದ್ದೆ ಅಂದರೆ ಸರಿ. ಸದರಿ ದಾವೆಯಲ್ಲಿ ನಾನು ದಾವಾ ಆಸ್ತಿಯ ಮಾಲೀಕ ಮತ್ತು ಸ್ವಾಧೀನದಾರ ಎಂದು ಪರಿಹಾರ ಕೋರಿ ದಾವೆ ಸಲ್ಲಿಸಿದ್ದೆ ಅಂದರೆ ಸರಿ. ಸದರಿ ದಾವೆಯಲ್ಲಿ ನಾನು ಸ್ವಾಧೀನತೆಯನ್ನು ಹೊಂದಿಲ್ಲ ಎಂದು ವಜಾಗೊಂಡಿರುತ್ತದೆ ಅಂದರೆ ಸರಿ, ಸಾಕ್ಷಿ ಮುಂದುವರಿದು ಮೇಲಿನ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಪು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೇಲಿನ ನ್ಯಾಯಾಲಯದ ತೀರ್ಪಿನ ವಿರುದ್ಧ ವಾದಿಯು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ.1288/2019 ರಂತೆ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ.

ಜಿ.ಎಲ್.ವೆಂಕಟರಾಮಯ್ಯ ಬಿನ್ ಲಕ್ಷ್ಮಯ್ಯ, ಗೋವಿಂದಪುರ ಗ್ರಾಮ, ಬೀರೂರು ಹೋಬಳಿ ಅಂದರೆ ನನ್ನ ವಿಳಾಸವಾಗಿರುತ್ತದೆ ಮತ್ತು ಸದರಿ ವಿಳಾಸಕ್ಕೆ ಅಂಚೆ ಬಂದರೆ ನನಗೆ ತಲುಪುತ್ತದೆ. ಈ ದಾವಾ ದಾಖಲಿಸುವ ಮುನ್ನ ವಾದಿಯು ನನಗೆ ನೋಟೀಸನ್ನು ನೀಡಿದ್ದು, ಅದನ್ನು ನಿರಾಕರಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಪ್ರತಿವಾದ ಪತ್ರದಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-1(ಎ) 1(ಬಿ) ಸಹಿಗಳು ನನ್ನ ಸಹಿ ಅಂದರೆ ಸರಿಯಲ್ಲ.

ದಿನಾಂಕ:13.07.1988 ರಂದು ವಾದಿಯಿಂದ ರೂ.3,500/-ಗಳನ್ನು ಪಡೆದು ದಾವಾ ಆಸ್ತಿಯನ್ನು ನಿಪಿ-1 ರಂತೆ ವಾದಿಗೆ ಬರೆದುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಗೋವಿಂದಪುರ ಗ್ರಾಮದ ಸರ್ವೇನಂಬರ್.41/3 ನನಗೆ ಸೇರಿದ್ದಾಗಿರುತ್ತದೆ, ಅದರ ವಿಸ್ತೀರ್ಣ 3 ಎಕರೆ 29 ಗುಂಟೆ ಇರುತ್ತದೆ. ಸದರಿ 3 ಎಕರೆ 29 ಗುಂಟೆಯಲ್ಲಿ ನಾನು ಸಂಪೂರ್ಣ ಸ್ವಾಧೀನದಲ್ಲಿರುತ್ತೇನೆ. ಸದರಿ ಸಂಪೂರ್ಣ 3 ಎಕರೆ 29 ಗುಂಟೆ ಆಸ್ತಿಯಲ್ಲಿ ಮೆಕ್ಕೆಜೋಳವನ್ನು ಬೆಳೆದಿರುತ್ತೇನೆ. ನಿಪಿ-8 ರ ಛಾಯಾಚಿತ್ರದಲ್ಲಿ ಕಾಣುವ ಜಮೀನಿನ ಪೂರ್ವಕ್ಕೆ ಪಂಚಾಯ್ತಿ ರಸ್ತೆ, ಪಶ್ಚಿಮಕ್ಕೆ ಗ್ರಾಮದ ಕಟ್ಟೆ, ದಕ್ಷಿಣಕ್ಕೆ ಪಂಚಾಯ್ತಿ ರಸ್ತೆ ಇರುತ್ತದೆ ಅಂದರೆ ಸರಿ. ಹಾಗೂ ಉತ್ತರಕ್ಕೆ ನನಗೆ ಸೇರಿದ ಉಳಿಕೆ ಜಮೀನು ಇರುತ್ತದೆ

ಅಂದರೆ, ಸಾಕ್ಷಿಯು 2 ಎಕರೆ 29 ಗುಂಟೆ ಜಮೀನು ಇರುತ್ತದೆ ಎಂದು ನುಡಿಯತ್ತಾರೆ. ಸದರಿ 2 ಎಕರೆ 29 ಗುಂಟೆ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆ.

ಗೋವಿಂದಪುರದ ಜಿ.ಹೆಚ್.ತಿಮ್ಮಪ್ಪ ಬಿನ್ ಹನುಮಂತಪ್ಪ ನಮ್ಮ ಸಂಬಂಧಿಕರಲ್ಲ, ಆದರೆ ನಮ್ಮ ಜಾತಿಯವರು, ಸದರಿ ತಿಮ್ಮಪ್ಪ ನನ್ನೊಂದಿಗೆ ವಿಶ್ವಾಸದಿಂದ ಇರುತ್ತಾರೆ. ನನಗೂ ಸದರಿ ತಿಮ್ಮಪ್ಪನವರಿಗೂ ಯಾವುದೇ ದ್ವೇಷ ಇಲ್ಲ ಅಂದರೆ, ಸಾಕ್ಷಿಯು ದಾವೆಯನ್ನು ಸಲ್ಲಿಸುವ ಪೂರ್ವದಿಂದಲೇ ದ್ವೇಷವಿದೆ ಎಂದು ನುಡಿಯುತ್ತಾರೆ. ದಿನಾಂಕಃ13.07.1988 ರಂದು ನಾನು ಸದರಿ ತಿಮ್ಮಪ್ಪರವರೊಂದಿಗೆ ಬಂದು ನಿಪಿ-1 ರಂತೆ ನೋಟರಿಯವರ ಮುಂದೆ 1 ಎಕರೆ ಜಮೀನನ್ನು ವಾದಿಗೆ ಕ್ರಯಕ್ಕೆ ಕೊಟ್ಟು ನಂತರದಲ್ಲಿ ನೊಂದಾಯಿತ ಕ್ರಯಪತ್ರವನ್ನು ಮಾಡಿಕೊಡುವುದಾಗಿ ತಿಳಿಸಿರುತ್ತೇನೆ ಅಂದರೆ ಸರಿಯಲ್ಲ. 1988 ನೇ ಸಾಲಿನಲ್ಲಿ 1 ಎಕರೆ ಜಮೀನನ್ನು ತುಂಡು ಭೂಮಿ ಎಂದು ಪರಿಗಣಿಸಿದ್ದು, ಮಾರಾಟ ಮಾಡಲು ಅವಕಾಶ ಇಲ್ಲದ ಕಾರಣ ಮುಂದೆ ಕರೆದಾಗ ಬಂದು ಕ್ರಯಪತ್ರ ನೊಂದಣಿ ಮಾಡಿಕೊಡುತ್ತೇನೆ ಎಂದು ನಿಪಿ-1 ರ ದಾಖಲೆಯನ್ನು ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ನೋಟರಿಯವರ ಸಮಕ್ಷಮ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಸಹಿಯನ್ನು ಗುರುತಿಸಿ ಜೆ.ಹೆಚ್.ತಿಮ್ಮಪ್ಪ ಎಂಬುವವರು ಸಹ ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ-14 ರಂತೆ ಸದರಿ ಜಿ.ಹೆಚ್.ತಿಮ್ಮಪ್ಪರವರು ನನ್ನ ಮತ್ತು ವಾದಿ ನಡುವೆ ಇದ್ದ ಮತ್ತೊಂದು ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದಾರೆ ಅಂದರೆ ಸರಿ.

ನಿಪಿ-1 ದಾಖಲೆಯ ಮುಖೇನ ದಾವಾ ಆಸ್ತಿಯನ್ನು ವಾದಿಯ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-1 ರ ದಾಖಲೆಯಾದಾಗಿನಿಂದಲೂ ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿದ್ದಾನೆ ಅಂದರೆ ಸರಿಯಲ್ಲ. ನಿಪಿ-8 ರ ಛಾಯಾಚಿತ್ರದಲ್ಲಿ ಕಾಣುವ ಹುಲ್ಲಿನ ಬಣವೆ, ಕಲ್ಲುಕಂಬ ಮತ್ತು ಟ್ರಾಕ್ಟರ್ ಟ್ರಾಲಿ ವಾದಿಗೆ ಸೇರಿದವುಗಳು ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ನೊಂದಣಿ ಕ್ರಯಪತ್ರ ಮಾಡಿಕೊಡಿ ಎಂದು ವಾದಿಯು ನಿಪಿ-4 ಮತ್ತು 5 ರಂತೆ ನನಗೆ ನೋಟೀಸನ್ನು ನೀಡಿದ್ದರು ಅಂದರೆ ಸರಿಯಲ್ಲ. ವಾದಿ ಸ್ವಾಧೀನದಲ್ಲಿರುವ 1 ಎಕರೆ ಜಮೀನನ್ನು ಕಬಳಿಸುವ ಸಲುವಾಗಿ ಸುಳ್ಳು ಪ್ರತಿವಾದಪತ್ರವನ್ನು ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ತುಂಡು ಭೂಮಿ ಕಾಯ್ದೆ ರದ್ದಾದ ನಂತರ ದಾವಾ ಆಸ್ತಿಗೆ

ಡಿ.ಡಬ್ಲ್ಯು:1

ಸಂಬಂಧಿಸಿದ ನೋಂದಣಿ ಕ್ರಯಪತ್ರ ಮಾಡಿಕೊಡಿ ಎಂದು ವಾದಿಯು ಮೌಖಿಕವಾಗಿ ಹಲವಾರು ಬಾರಿ ಬೇಡಿಕೆ ಇಟ್ಟಿದ್ದರು ಅಂದರೆ ಸರಿಯಲ್ಲ. ದಾವಾ ಆಸ್ತಿಯ ಕ್ರಯಪತ್ರವನ್ನು ಬರೆಸಿಕೊಳ್ಳಲು ವಾದಿಯು ಯಾವಾಗಲೂ ಸಿದ್ಧರಿದ್ದರೂ ಸಹ ನಾನೇ ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಗೆ ಮಾರಾಟ ಮಾಡಿರುವ 1 ಎಕರೆ ಜಮೀನನ್ನು ಕಬಳಿಸುವ ಸಲುವಾಗಿ ನೋಂದಣಿ ಮಾಡಿಸಿಕೊಡಲು ನಿರಾಕರಿಸುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ವಿಚಾರವಾಗಿ ವಾದಿಯು ನನಗೆ ಲಿಖಿತವಾಗಿ ನೋಟೀಸನ್ನು ನೀಡಿದ್ದರು ಅಂದರೆ ಸರಿಯಲ್ಲ. ಸರ್ವೇನಂಬರ್.41/3 ರಲ್ಲಿರುವ ಒಟ್ಟು 3 ಎಕರೆ 29 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ:ಗ್ರಾಮದ ಕಟ್ಟೆ, ಉತ್ತರಕ್ಕೆ:ರಸ್ತೆ ಮತ್ತು ದಕ್ಷಿಣಕ್ಕೆ:ಪಂಚಾಯ್ತಿ ರಸ್ತೆ ಇರುತ್ತದೆ. ದಾವೆಗಾಗಿ ನಿಡಿ-10 ಮತ್ತು 11 ನ್ನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

ನನಗೆ ಸೇರಿದ ಆಸ್ತಿ 3 ಎಕರೆ 29 ಗುಂಟೆ ಅಲ್ಲ, ಬದಲಾಗಿ 3 ಎಕರೆ 19 ಗುಂಟೆ ಮಾತ್ರ ಅಂದರೆ ಸರಿಯಲ್ಲ. 1968 ರಲ್ಲಿ ನರಸನಾಯ್ಕ ರವರ ವಿರುದ್ಧ 3 ಎಕರೆ 29 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ದಾಖಲು ಮಾಡಿದ್ದೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರ:ದ:ನ್ಯಾ:ದಂ.,ರವರು,
ಕಡೂರು.